ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು –

ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳನ್ನು ದುರುಸ್ತಿ ಮಾಡುವುದು

282 (1364) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) – ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ದುರಸ್ತಿಗೆ ಸರ್ಕಾರ ನಿಗದಿಪಡಿಸಿದ ಮತ್ತು ಬಿಡುಗಡೆ ಮಾಡಿದ ಅನುದಾನವೆಷ್ಟು, (ವಿವರ ನೀಡುವುದು)

ಆ) ಮುಂಡರಗಿ ಮತದಾರಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳೆಷ್ಟು ಕಿಲೋ ಮೀಟರ್‌ಗಳಿವೆ,

ಇ) ಅವುಗಳ ರಿಪೇರಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು ,

ಈ) ಮೂರು ವರ್ಷಗಳಲ್ಲಿ ರಾಜ್ಯಹೆದ್ದಾರಿ ನಿರ್ವಹಣೆಯಡಿ ಮುಂಡರಗಿ ಮತದಾರ ಕ್ಷೇತ್ರದಲ್ಲಿ ರಾಜ್ಯಹೆದ್ದಾರಿ ನಿರ್ವಹಣೆಗಾಗಿ ತೆಗೆದುಕೊಂಡ ರಸ್ತೆಗಳಾವುವು ಹಾಗೂ ಅವುಗಳ ರಿಪೇರಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು).

ಅ) 2006–07ನೇ ಸಾಲಿನಲ್ಲಿ ಲೆ ಶೀ 3054 – ರಸ್ತೆ ಮತ್ತು ಸೇತುವೆ (ಯೋಜನೆ)– ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯಡಿ ರೂ 13271 00 ಲಕ್ಷಗಳ ಅನುದಾನವನ್ನು ಜಿಲ್ಲಾ ಮುಖ್ಯರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ ಹಾಗೂ ಪೂರಕ ಆಯವ್ಯಯದಲ್ಲಿ ರೂ 15000 00 ಲಕ್ಷಗಳನ್ನು ಬಾಕಿ ಬಿಲ್ಲುಗಳನ್ನು ತೀರುವಳಿ ಮಾಡಲು ನಿಗದಿಪಡಿಸಲಾಗಿದ್ದು, ಸದರಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಲೆ ಶೀ 3054 – ಯೋಜನೇತರ – 12ನೇ ಹಣಕಾಸು ಆಯೋಗದಡಿಯಲ್ಲಿ ರಸ್ತೆ ಮತ್ತು ಸೇತುವೆಗಳ ನಿರ್ವಹಣೆಗಾಗಿ ರೂ 14615 00 ಲಕ್ಷಗಳನ್ನು

ನಿಗದಿಪಡಿಸಲಾಗಿದ್ದು ಸದರಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ

ಆ) ಮುಂಡರಗಿ ಮತದಾರ ಕ್ಷೇತ್ರದಲ್ಲಿ 176 47 ಕಿ ಮೀ ಗಳಷ್ಟು ಉದ್ದದ ಲೋಕೋಪಯೋಗಿ ರಸ್ತೆಗಳಿರುತ್ತವೆ

ಇ) ಮುಂಡರಗಿ ಮತದಾರ ಕ್ಷೇತ್ರ ರಸ್ತೆಗಳ ರಿಪೇರಿಗೆ ಬಿಡುಗಡೆ ಮಾಡಿದ ಹಣ

ರೂ ಲಕ್ಷಗಳಲ್ಲಿ

ಕ್ರ.ಸಂ	ಲೆ ಶೀ	ಬಿಡುಗಡೆ ಮಾಡಿದ ಹಣ
1	3054 (ಯೋಜನೆ) ರಸ್ತೆ ಮತ್ತು ಸೇತುವೆ–ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ	419 00
2	3054 (ಯೋಜನೇತರ) – 12ನೇ ಹಣಕಾಸು	35 28

ಈ) ಮುಂಡರಗಿಯಲ್ಲಿ ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣೆಗಾಗಿ ಗದಗ ಪ್ಯಾಕೇಜ್‌ನಡಿ 62 50 ಕಿ ಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು ರೂ 187 57 ಲಕ್ಷಗಳಲ್ಲಿ ಕೈಗೊಳ್ಳಲಾಗಿದೆ ರಾಜ್ಯ ಹೆದ್ದಾರಿಗಳ ವಿವರ ಕೆಳಕಂಡಂತಿದೆ

1	ಕಲ್ಮಲ – ಶಿಗ್ಗಾಂ ರಾಜ್ಯ ಹೆದ್ದಾರಿ	–	24 90 ಕಿ ಮೀ
2	ಅರಬಾವಿ – ಚಳ್ಳಕೆರೆ ರಾಜ್ಯ ಹೆದ್ದಾರಿ	–	37 60 ಕಿ ಮೀ
	ಒಟ್ಟು	–	**62 50 ಕಿ ಮೀ**

ಈ ಕಾಮಗಾರಿಗಳು 15–07–2005 ರಲ್ಲಿ ಪ್ರಾರಂಭಗೊಂಡಿರುತ್ತವೆ

ಶ್ರೀ ಎಸ್ ಎಸ್ ಪಾಟೀಲ್ – ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಕೊಟ್ಟಿದ್ದಾರೆ ಈ ಲೋಕೋಪಯೋಗಿ ಇಲಾಖೆಗೆ ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಇದೆಯೇ? ಇದರಲ್ಲಿ ಅವರು ಉತ್ತರವನ್ನು ಕೊಡುತ್ತಾರೆ ಇಲ್ಲಿ ನಾನು

ಕೇಳಿರುವುದು ಲೋಕೋಪಯೋಗಿ ಇಲಾಖೆಗೆ ಎಷ್ಟು ರಸ್ತೆ ಇದೆ, ಅದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂದು ಅದಕ್ಕೆ ನನ್ನ ಕ್ಷೇತ್ರದಲ್ಲಿ 176 ಕಿಲೋ ಮೀಟರ್ ಇದೆ ಎಂದು ಹೇಳಿದ್ದಾರೆ ಅದಕ್ಕೆ ಹಣ ಎಷ್ಟು ಬಿಡುಗಡೆ ಮಾಡಿದ್ದೀರೆಂದರೆ 3054 ರಸ್ತೆ ಮತ್ತು ಮತ್ತು ಸೇತುವೆ ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯಿಂದ ಹಿಡಿದು 419 ಲಕ್ಷ ರೂ ಗಳನ್ನು ಬಿಡುಗಡೆ ಮಾಡಿದ್ದೇವೆನ್ನುತ್ತಾರೆ ಅಂದರೆ 176 ಕಿಲೋಮೀಟರ್‌ಗೆ ಇಲ್ಲಿ ಕೊನೆಯಲ್ಲಿ ಹೇಳಿದ್ದಾರೆ ಏನು ಹೇಳಿದ್ದಾರೆಂದರೆ 62 ಕಿಲೋ ಮೀಟರ್ package ನಲ್ಲಿ ಮಾಡಿದ್ದೇವೆಂದು ಹೇಳುತ್ತಾರೆ ಆದರೆ ನೂರು ಕಿಲೋ ಮೀಟರ್‌ಗೆ 4 ಕೋಟಿ ಮಾಡಿದರೆ ಒಂದೊಂದು ಕಿಲೋ ಮೀಟರ್ ಗೆ ನಾಲ್ಕು ಲಕ್ಷ ರೂ ಬೀಳುತ್ತದೆ ಇದ್ದು ಊರಿನಲ್ಲಿ ಅಲ್ಲಿ ರಸ್ತೆಯಲ್ಲಿ ಓಡಾಡಲು ಬರುವುದಿಲ್ಲ ಏನೇನೂ ಮಾಡಿಲ್ಲ ಖಂಡಿತವಾಗಿ ಹೇಳುತ್ತೇನೆ, ನನಗೆ ನಾಚಿಕೆ ಬರುತ್ತದೆ ಹಳ್ಳಿ ಜನರು ಬಯ್ಯುತ್ತಾರೆ ಈಗ ಅಲ್ಲಿ ಅಡ್ಡಾಡಲು ನನಗೆ ಕಷ್ಟವಾಗಿದೆ ಆಮೇಲೆ ಈ package ಮಾಡಿದ್ದಾರೆ, ಈ package ಅನ್ನು ಚಾಲು ಮಾಡುವುದಿಲ್ಲ ಎಲ್ಲೆಲ್ಲೊ ಅಷ್ಟಿಷ್ಟು ಮಾಡಿ ಹೋಗಿ ಬಿಡುತ್ತಾರೆ ಇದು ಮೂರು ವರ್ಷದ ಪ್ಯಾಕೇಜ್ ಎನ್ನುತ್ತಾರೆ 2005 ರಿಂದ ಚಾಲೂ ಆಗಿದೆ ಇದು ಇದು ಮುಗಿಯುವುದು ಯಾವಾಗ? ಏನು condition ಹಾಕಿದ್ದೀರಿ? 419 ಲಕ್ಷ ರೂ ಗಳನ್ನು ಬಿಡುಗಡೆ ಮಾಡಿದರೆ ಆ ರಸ್ತೆ ಏಕೆ ಸರಿಯಾಗಿ ರಿಪೇರಿಯಾಗಿಲ್ಲ? ಇದನ್ನು ಕೂಡ ತಾವು ಹೇಳಬೇಕಾಗುತ್ತದೆ ಮತ್ತು ಈ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಎಂದು ಉತ್ತರ ಕೊಟ್ಟಿದ್ದೀರಲ್ಲ, ಅದು PWD ಯಲ್ಲಿದೆಯೇ? ನಾನು ಕೇಳಿರುವುದು ಇಡೀ PWD ಬಗ್ಗೆಯೇ ಗ್ರಾಮೀಣ ರಸ್ತೆಯ ಬಗ್ಗೆ ನಾನು ಕೇಳಿಲ್ಲ ಅದು ಬೇರೆ ಅದು ಮಾನ್ಯ ಉದಾಸಿಯವರಿಗೆ ಬರುತ್ತದೆ ಉತ್ತರ ಕೊಡುವಾಗ ಗ್ರಾಮೀಣ ರಸ್ತೆ ಎಂದು ಕೂಡಿಸಿ ಕೊಟ್ಟಿದ್ದಾರೆ PWD ಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? 176 ಕಿಲೋ ಮೀಟರ್ ಗೆ ರಸ್ತೆ ರಿಪೇರಿಗೆ ಎಷ್ಟು ರೊಕ್ಕ ಬಿಡುಗಡೆ ಮಾಡಿದ್ದೀರಿ ಎಂದು ತಾವು ಹೇಳಬೇಕು ಮತ್ತು ಈ 62 ಕಿಲೋಮೀಟರ್‌ನ package ಅನ್ನು ಮಾಡಿದ್ದೀರಲ್ಲ, ಈ package ಅನ್ನು ಎಷ್ಟು ವರ್ಷದಿಂದ ಮಾಡುತ್ತಿದ್ದೀರಿ? ಇದು ಎಷ್ಟು ದೊಡ್ಡ ಕಂಡೀಷನ್

ಇದೆ? ಇನ್ನೂ ಏಕೆ ಅವುಗಳು ಮುಗಿದಿಲ್ಲ? ಈ package ಅನ್ನು ಎಷ್ಟು ವರ್ಷದಿಂದ ಮಾಡುತ್ತಿದ್ದೀರಿ? ಇದಕ್ಕೆ ಎಷ್ಟು ದೊಡ್ಡ condition ಇದೆ? ಇದೇಕೆ ಇನ್ನೂ ಮುಗಿದಿಲ್ಲ? ಏಕೆ ಚಾಲೂ ಆಗಿಲ್ಲ? ಎಂಬುದನ್ನು ದಯಮಾಡಿ ಹೇಳಬೇಕು

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) – ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ ಬಗ್ಗೆ ಹೇಳುತ್ತಾ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸೇರಿರತಕ್ಕಂಥ ಗ್ರಾಮೀಣ ರಸ್ತೆಗಳ ಬಗ್ಗೆ ಕೂಡ ವಿವರಗಳನ್ನು ಕೊಟ್ಟಿದ್ದೇವೆ ಅದೊಂದು ವೇಳೆ ವಿವರಗಳು ಬೇಡವೆಂದರೂ ಕೂಡ ಪೂರಕ ಆಯವ್ಯಯದಲ್ಲಿ 15 ಸಾವಿರ ಲಕ್ಷ ರೂಪಾಯಿಗಳು ಬಂದಿದೆ ಅದರ ಬಿಲ್ಲುಗಳ ತೀರುವಳಿ ಮಾಡುವುದಕ್ಕೆ ಕೂಡ ಹಣ ನಿಗದಿ ಮಾಡಲಾಗಿದೆ ಮುಂಡರಗಿ ಮತಕ್ಷೇತ್ರಕ್ಕೆ ಸಂಬಂಧಪಡುವಂತಹ 176 47 ಕಿಲೋಮೀಟರ್ ಉದ್ದದ ಲೋಕೋಪಯೋಗಿ ರಸ್ತೆಯಲ್ಲಿ ಶೀರ್ಷಿಕೆ 3054 ರ ಶೀರ್ಷಿಕೆಯಡಿ 12ನೇ ಹಣಕಾಸು ಯೋಜನೆಯಲ್ಲಿ 35 28 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಇನ್ನು ಮುಂಡರಗಿಯಲ್ಲಿ ರಾಜ್ಯ ಹೆದ್ದಾರಿ ನಿರ್ವಹಣೆಗಾಗಿ ಗದಗ ಪ್ಯಾಕೇಜ್ ಯೋಜನೆ ಕೆಳಗೆ ರಾಜ್ಯ ಹೆದ್ದಾರಿಯ 62 50 ಕಿಲೋಮೀಟರ್ ರಸ್ತೆ ಕಾಮಗಾರಿಯನ್ನು 187 57 ಲಕ್ಷ ರೂಪಾಯಿಗಳಲ್ಲಿ ಕೈಗೊಳ್ಳಲಾಗಿದೆ ಅದರಲ್ಲಿ ಕಲ್ಮಲ–ಶಿಗ್ಗಾಂವ್ ರಾಜ್ಯ ರಸ್ತೆಯ 24 90 ಕಿಲೋಮೀಟರ್, ಅರಬಾವಿ–ಚಳ್ಳಕೆರೆ ರಾಜ್ಯ ರಸ್ತೆಯ 37 60 ಕಿಲೋಮೀಟರ್ ಕಾಮಗಾರಿಗಳು ದಿನಾಂಕ 15 7 05 ರಂದು ಪ್ರಾರಂಭವಾಗಿದೆ ತಾವು ಹೇಳಿದಂತೆ, 187 57 ಲಕ್ಷ ರೂಪಾಯಿಗಳ ಪ್ಯಾಕೇಜ್ ಕೈಗೊಳ್ಳಲಾಗಿದೆ

ಶ್ರೀ ಎಸ್ ಎಸ್ ಪಾಟೀಲ್ – ಪ್ಯಾಕೇಜ್ ಕೊಟ್ಟಿದ್ದರೂ ಚಾಲೂ ಆಗುವುದಿಲ್ಲ ಹೀಗೇ 3 ವರ್ಷಗಳಿಂದಲೂ ಮುಗಿಯುತ್ತಾ ಬಂದಿದೆ! ಅನಂತರ ಚಾಲೂ ಮಾಡಿದ್ದೇವೆಂದು ಮುಗಿಸಿಬಿಡುವುದ! ಆ ರಸ್ತೆಗಳು ಹಾಗೇ ಇದೆ ಆ ರಸ್ತೆಯಲ್ಲಿ ಅಡ್ಡಾಡುವುದಕ್ಕಾಗುವುದಿಲ್ಲ ನೀವು ಅಲ್ಲಿಯೇ ಅಡ್ಡಾಡುತ್ತೀರಿ ಸಿಂಗಟಾಲ್ಲೂರಿಗೆ ಹೋಗುವ ರಸ್ತೆ ನೋಡಿದ್ದೀರಿ ತಾವು ಬರಲಿಲ್ಲ ತಾವು ಅಲ್ಲಿಗೆ ಬಂದರೂ ಬ್ರಿಜ್ ಮೇಲೆ ಹೋಗಿಬಿಡುತ್ತೀರಿ ಜಾತ್ರೆಗೆ ಹೋಗುವ ಜನರೆಲ್ಲರೂ ನನ್ನನ್ನು ಬೈದಿದ್ದಾರೆ ಎತ್ತಿನಗಾಡಿಗಳೂ ಹೋಗುವುದಿಲ್ಲ ಆ ರೀತಿ ರಸ್ತೆಗಳಿವೆ

ಇಲ್ಲಿ ಎಷ್ಟು ರೊಕ್ಕ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ ಹಾಗಾದರೆ, ರೊಕ್ಕ ಎಲ್ಲಿ ಹೋಯಿತು? ಅದಕ್ಕೋಸ್ಕರ, ದಯವಿಟ್ಟು ಹೇಳಬೇಕು ಆ ರಸ್ತೆಗಳನ್ನು ಕೂಡಲೇ ರಿಪೇರಿ ಮಾಡಿಕೊಡುತ್ತೇವೆಂದು ಹೇಳಬೇಕಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ – ಖಂಡಿತವಾಗಿಯೂ ಕೂಡ ಆ ರಸ್ತೆ ರಿಪೇರಿಗೆ ಸಂಬಂಧಿಸಿದಂತೆ ನಾನು ಕ್ರಮ ಕೈಗೊಳ್ಳುತ್ತೇನೆ ಮತ್ತು ಉತ್ತರ ವಲಯದ Chief Engineer ಗೆ ಆ ವಿಷಯ ತಿಳಿಸುತ್ತೇನೆ

ಹಲಬರ್ಗಾ ಗ್ರಾಮಕ್ಕೆ 220 ಕೆವಿ ವಿದ್ಯುತ್ ಘಟಕದ ಮಂಜೂರಾತಿಯ ಬಗ್ಗೆ

284 (2077) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಕ್ಷೇತ್ರದ ಹಲಬರ್ಗಾ ಗ್ರಾಮಕ್ಕೆ 220 ಕೆವಿ ವಿದ್ಯುತ್ ಘಟಕ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಮಂಜೂರಾಗಿದ್ದಲ್ಲಿ, ಈ ವಿದ್ಯುತ್ ಘಟಕದ ಕೆಲಸ ಯಾವಾಗ ಪ್ರಾರಂಭಿಸಲಾಗುವುದು,

ಇ) ಕೆಲಸ ಪ್ರಾರಂಭಿಸಿದ್ದರೆ ಕಾಮಗಾರಿ ಯಾವ ಹಂತದಲ್ಲಿದೆ,

ಈ) ಪ್ರಾರಂಭಿಸಲ್ಪಟ್ಟ ಕೆಲಸ ಈ ವರ್ಷ ಪೂರ್ತಿಗೊಳಿಸಿ ಅಲ್ಲಿಯ ಜನರಿಗೆ ವಿದ್ಯುತ್ ಸೌಕರ್ಯ ದೊರಕಿಸಿ ಕೊಡಲಾಗುವುದೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು, ಬಂದಿದೆ

ಆ) ಈ ಉದ್ದೇಶಿತ ವಿದ್ಯುತ್ ಉಪ ಕೇಂದ್ರದ ಸ್ಥಾಪನೆಗೆ ತಾಂತ್ರಿಕ ಸಲಹಾ ಸಮಿತಿಯು ದಿನಾಂಕ 05 10 2005 ರಲ್ಲಿ ಅನುಮೋದನೆ ನೀಡಿರುತ್ತದೆ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ ಕೂಡಲೇ ಇದಕ್ಕೆ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ ಟೆಂಡರಿಂಗ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು